ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರ ಕಛೇರಿ,
ಹೆಚ್. ಬಿ. ಕಾಂಪ್ಲೆಕ್ಸ್, 6ನೇ ಮಹಡಿ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು – 560 009.

ಸಂಖ್ಯೆ:ಡಿಪಿಎನ್/ಎಸ್.ಸಿ.ಎಸ್.ಟಿ./1/2017.18 ದಿನಾಂಕ: 13.07.2017.

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
5ನೇ ಮಹಡಿ, ಬಹುಮಹಡಿ ಕಟ್ಟಡ,ಬೆಂಗಳೂರು.

ಮಾನ್ಯರೇ.

ವಿಷಯ: ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸಭೆಯ ನಡವಳಿಯ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:
1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಪತ್ರ ಸಂಖ್ಯೆ: ಸಕನಿ/ಸಿಎಸ್–1/ಸಿಆರ್–3/ರಾಜಾಸ/2017.18 ದಿನಾಂಕ: 08.06.2017.
2. ಸರ್ಕಾರದ ಪತ್ರ ಸಂಖ್ಯೆ: ಒಇ 31 ಪಿಸಿಆರ್ 2017 ದಿನಾಂಕ: 23.06.2017.
3. ಈ ಕಛೇರಿ ಪತ್ರ ಸಮ ಸಂಖ್ಯೆ: ದಿನಾಂಕ: 23.06.2017.
4. ಈ ಕಛೇರಿಯಿಂದ ಮಾನ್ಯ ಕಾನೂನು ಸಚಿವರವರ ಆಪ್ತ ಕಾರ್ಯದರ್ಶಿಗಳವರಿಗೆ ಬರೆದ ಪತ್ರ ಸಮ ಸಂಖ್ಯೆ ದಿನಾಂಕ: 10.07.2017(ಪ್ರತಿಯನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ವಿಳಾಸಿಸಿದೆ.)
5. ತಮ್ಮ ಕಛೇರಿ ಪತ್ರ ಸಂಖ್ಯೆ ಸಕನಿ/ಸಿಎಸ್–1/ಸಿಆರ್–03/ರಾಜಾಸ/2017.18 ದಿನಾಂಕ: 27.06.2017.

*****

ಮೇಲ್ಕಂಡ ವಿಷಯದ ಕುರಿತು, ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 25.04.2017 ರಂದು ನಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ(ದೌರ್ಜನ್ಯ ತಡೆ) ಕಾಯ್ದೆ 1989 ಮತ್ತು ನಿಯಮಗಳು 1995 ರಡಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ನಡವಳಿ ಪ್ರತಿಯನ್ನು ಉಲ್ಲೇಖ(1)ರ ಪತ್ರದಲ್ಲಿ ಈ ಕಛೇರಿಗೆ ಕಳುಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಲಾಗಿದ್ದು. ಅದರಂತೆ, ಈ ಕಛೇರಿಯ ಉಲ್ಲೇಖ (3) ಮತ್ತು (4)ರ ಅನುಸಾರ ಈ ಕಛೇರಿಯ ಪಾಲನಾ ವರದಿಯನ್ನು ಈಗಾಗಲೇ ನೀಡಲಾಗಿದೆ. ಆದಾಗ್ಯೂ ಸದರಿ ಪತ್ರದ ಜೆರಾಕ್ಸ್ ಪ್ರತಿಗಳನ್ನು ನಿಮ್ಮ ಮಾಹಿತಿಗಾಗಿ ಮತ್ತೊಮ್ಮೆ ನೀಡಲಾಗಿದೆ.

ತಮ್ಮ ವಿಶ್ವಾಸಿ,

(ಕೆ.ರುದ್ರಸ್ವಾಮಿ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು (ಪ್ರ),
ಬೆಂಗಳೂರು.

ಕರ್ನಾಟಕ ಸರ್ಕಾರ

(ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ)

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರ ಕಛೇರಿ,
ಎಫ್. ಸಿ. ಬ್ಲಾಕ್, 6ನೇ ಮಹಡಿ,
ಕಾವೇರಿ ಭವನ, ಕೆಂಪೇಗೌಡ ರಸ್ತೆ,
ಬೆಂಗಳೂರು – 560 009.

ಸಂಖ್ಯೆ:ಡಿಪಿಎನ್/ಎಸ್.ಸಿ.ಎಸ್.ಟಿ./1/2017.18

ದಿನಾಂಕ: 23.06.2017.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪಿ.ಸಿ.ಎ.ಎಸ್)
ಒಳಾಡಳಿತ ಇಲಾಖೆ,
ವಿಧಾನ ಸೌದ, ಬೆಂಗಳೂರು.

ಮಾನ್ಯರೇ.

ವಿಷಯ: ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸಭೆಯ ನಡವಳಿಯ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಪತ್ರ ಸಂಖ್ಯೆ: ಸಕನಿ/ಸಿಎಸ್–1/ಸಿಆರ್–3/ರಾಜಾಸ/2017.18 ದಿನಾಂಕ: 08.06.2017.

2. ಸರ್ಕಾರದ ಪತ್ರ ಸಂಖ್ಯೆ: ಒಇ 31 ಪಿಸಿಆರ್ 2017 ದಿನಾಂಕ: 23.06.2017.

*****

ಮೇಲ್ಕಂಡ ವಿಷಯದ ಕುರಿತು, ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 25.04.2017 ರಂದು ನಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ(ದೌರ್ಜನ್ಯ ತಡೆ) ಕಾಯ್ದೆ 1989 ಮತ್ತು ನಿಯಮಗಳು 1995 ರಡಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ನಡವಳಿ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಲಾಗಿದೆ. ಅದರಂತೆ, ನಡವಳಿಯಲ್ಲಿ ನಮೂದಿಸಿದ ಈ ಇಲಾಖೆಗೆ ಸಂಬಂಧಿಸಿದ ವಿಷಯಗಳ ಕುರಿತು ಅನುಪಾಲನಾ ವರದಿಯನ್ನು ಈ ಕೆಳಕಂಡಂತೆ ನಿವೇದಿಸಿಕೊಳ್ಳಲಾಗಿದೆ.

1. <u>ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವ ಬಗ್ಗೆ.</u>

ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಗಳು ರಚನೆಯಾಗಿದ್ದಾಗ್ಯೂ ಸಹ, ಈ ನ್ಯಾಯಾಲಯಗಳಿಗೆ ಭಾರತ ದಂಡ ಸಂಹಿತೆ ಪ್ರಕರಣಗಳನ್ನೂ ಸಹ ವರ್ಗಾಯಿಸಿರುವುದರಿಂದ, ವಿಶೇಷ ಪ್ರಕರಣಗಳಿಗೆ ಸಮಯಾವಕಾಶವು ಸಾಕಾಗದೇ ಇರುವ ಕಾರಣ ಅನಗತ್ಯ ವಿಳಂಬ ಉಂಟಾಗುವುದರಿಂದ ಸಾಕ್ಷಿಗಳು ಪ್ರಕರಣದ ಬಗ್ಗೆ ಆಸಕ್ತಿಯನ್ನು ಕಳೆದುಕೊಂಡು ಪ್ರಕರಣವನ್ನು ಬೆಂಬಲಿಸಿ ಸಾಕ್ಷಿ ಹೇಳುವ ಉತ್ಸಾಹವನ್ನೂ ಸಹ

ಕಳೆದುಕೊಳ್ಳುವ ಕಾರಣ ಶಿಕ್ಷೆಯ ಪ್ರಮಾಣ ಕಡಿಮೆ ಆಗುತ್ತಿರುತ್ತದೆ. ಅಲ್ಲದೆ ಸಾಕ್ಷಿಗಳು, ಪಿರ್ಯಾದಿ ಹಾಗೂ ನೊಂದ ವ್ಯಕ್ತಿಗಳು ನ್ಯಾಯಾಲಯದ ಹೊರಗೆ ಆರೋಪಿಗಳ ಜೊತೆಗೆ ರಾಜೀ ಆಗಿ ನ್ಯಾಯಾಲಯದಲ್ಲಿ ಪ್ರತಿಕೂಲ ಸಾಕ್ಷಿ ಹೇಳುತ್ತಿರುವುದರಿಂದ ಬಹಳಷ್ಟು ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತದೆ.

2. <u>ದೌರ್ಜನ್ಯ ಪ್ರಕರಣಗಳ ಇತ್ಯರ್ಥವು ನಿಧಾನಗತಿಯಲ್ಲಿ ಆಗುತ್ತಿರುವ ಬಗ್ಗೆ ಕಾರಣ.</u>

ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಗಳು ರಚನೆಯಾಗಿದ್ದಾಗ್ಯೂ ಸಹ, ಈ ನ್ಯಾಯಾಲಯಗಳಿಗೆ ಭಾರತ ದಂಡ ಸಂಹಿತೆ ಪ್ರಕರಣಗಳನ್ನೂ ಸಹ ವರ್ಗಾಯಿಸಿರುವುದರಿಂದ, ವಿಶೇಷ ಪ್ರಕರಣಗಳಿಗೆ ಸಮಯಾವಕಾಶವು ಸಾಕಾಗದೇ ಇರುವ ಕಾರಣ ಅನಗತ್ಯ ವಿಳಂಬ ಉಂಟಾಗುತ್ತದೆ.

3. <u>ದೋಷ ಮುಕ್ತ (Acquit) ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಿರುವ ಪ್ರಕರಣಗಳ ವಿವರ.</u>

ದೌರ್ಜನ್ಯ ಪ್ರಕರಣಗಳು ನ್ಯಾಯಾಲಯದಲ್ಲಿ ಬಿಡುಗಡೆಯಾದಾಗ ಸದರಿ ಪ್ರಕರಣಗಳ ತೀರ್ಪುಗಳನ್ನು ಪರಾಮರ್ಶಿಸಿಸಿ, ಮೇಲ್ಮನವಿ ಸಲ್ಲಿಸುವ ಪ್ರಕರಣಗಳಲ್ಲಿ ಈ ಕಛೇರಿಯಿಂದ ಅಭಿಪ್ರಾಯ ನೀಡಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. 2014-2015-2016ರ ವರ್ಷಗಳಲ್ಲಿ ಈ ಕಛೇರಿಯಿಂದ ಮೇಲ್ಮನವಿ ಸಲ್ಲಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾದ ಪ್ರಕರಣಗಳ ವಿವರಗಳನ್ನು ಪ್ರತ್ಯೇಕ ಪಟ್ಟಿ ಮಾಡಿ ಅವಗಾಹನೆಗಾಗಿ ಈ ಪತ್ರದೊಂದಿಗೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

(ಕೆ.ರುದ್ರಸ್ವಾಮಿ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು (ಪ್ರ),
ಬೆಂಗಳೂರು.

ಪ್ರತಿಯನ್ನು: ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಸಂಖ್ಯೆ:ಡಿಪಿಎನ್/ಎಸ್.ಸಿ.ಎಸ್.ಟಿ./1/2017.18

ದಿನಾಂಕ: 10.07.2017.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ
ಸಚಿವರವರ ಆಪ್ತ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು.

-ಇವರಿಗೆ

ಮಾನ್ಯರೇ.

ವಿಷಯ: ದಿನಾಂಕ: 25.04.2017 ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸಭೆಯ ನಡವಳಿಯ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಪತ್ರ ಸಂಖ್ಯೆ: ಸಕನಿ/ಸಿಎಸ್-1/ಸಿಆರ್-3/ರಾಜಾಸ/2017.18 ದಿನಾಂಕ: 08.06.2017.

*****

ಮೇಲ್ಕಂಡ ವಿಷಯದ ಕುರಿತು, ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 25.04.2017 ರಂದು ನಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ(ದೌರ್ಜನ್ಯ ತಡೆ) ಕಾಯ್ದೆ 1989 ಮತ್ತು ನಿಯಮಗಳು 1995 ರಡಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ನಡವಳಿ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಲಾಗಿದೆ. ಅದರಂತೆ, ನಡವಳಿಯಲ್ಲಿ ಈ ಕೆಳಕಂಡ ವಿಷಯದ ಬಗ್ಗೆ ನಮೂದು ಮಾಡಲಾಗಿದೆ.

1. <u>ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆಯಾಗುತ್ತಿರುವ ಬಗ್ಗೆ.</u>

<u>ನಡವಳಿ ಕ್ರ.ಸಂ:4:</u>

Acquit ಆಗಿರುವ ಎಲ್ಲಾ ಪ್ರಕರಣಗಳನ್ನು ಸರ್ಕಾರಿ ಅಭಿಯೋಗ ಮತ್ತು ವ್ಯಾಜ್ಯಗಳ ಇಲಾಖೆಯು ವಿಶ್ಲೇಷಿಸಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಅವಗಾಹನೆಗೆ ಮಂಡಿಸುವುದು.

ಅದರಂತೆ 2016ನೇ ವರ್ಷದಲ್ಲಿ 377 ಪ್ರಕರಣಗಳ ವಿವರಗಳನ್ನು ನಮೂದಿಸಲಾಗಿದೆ. ಸದರಿ ಪ್ರಕರಣಗಳು ಈ ಕೆಳಕಂಡ ಕಾರಣಗಳಿಗಾಗಿ ಬಿಡುಗಡೆಯಾಗಿರುತ್ತವೆ.

| ಕ್ರಮ ಸಂಖ್ಯೆ | ಬಿಡುಗಡೆಗೆ ಕಾರಣಗಳು | ಶೇಕಡಾವಾರು ಪ್ರಮಾಣ |
|---|---|---|
| 01 | ಪ್ರಮುಖ ಸಾಕ್ಷಿಗಳಾದಂತಹ ಫಿರ್ಯಾದಿ, ಬಾಧಿತರು, ಗಾಯಾಳುಗಳು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ. | 90% |
| 02 | ಪ್ರತ್ಯಕ್ಷ ಸಾಕ್ಷಿ ಇತರೇ ಸಾಂದರ್ಭಿಕ ಮತ್ತು ಮಹಜರ್ ಸಾಕ್ಷಿಗಳು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ | 5% |
| 03 | ಸಾಕ್ಷಿದಾರರ ಸಾಕ್ಷ್ಯದಲ್ಲಿ ವ್ಯತಿರಿಕ್ತತೆ ಇರುವುದರಿಂದ ಮತ್ತು ಕೆಲವೊಂದು ಪ್ರಕರಣಗಳಲ್ಲಿ ಸ್ವತಂತ್ರ ಸಾಕ್ಷಿಗಳು ಲಭ್ಯವಿರದೇ ಇದ್ದುದರಿಂದ. | 5% |

ಪ್ರಕರಣಗಳಲ್ಲಿ ಆರೋಪಿತರ ಬಿಡುಗಡೆಗೆ ಕಾರಣಗಳ ಪೂರ್ಣ ವಿವರಗಳ ಮಾಹಿತಿಯ ತಃಖ್ತೆಯನ್ನು ಈ ಪತ್ರದೊಂದಿಗೆ ಮಾನ್ಯರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

<u>ನಡವಳಿ ಕ್ರ.ಸಂ:5:</u>

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸದರಿ ಪ್ರಕರಣಗಳ ಬಗ್ಗೆ ಸಭೆ ನಡೆಸಿ Acquit ಆಗಿರುವ ಪ್ರಕರಣಗಳಲ್ಲಿ ಮೇಲ್ಮನವಿಗೆ ಅರ್ಹ ಪ್ರಕರಣಗಳನ್ನು ಗುರುತಿಸಿ ಮೇಲ್ಮನವಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡುವುದು.

ಅದರಂತೆ, ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಬಿಡುಗಡೆಯಾದ 2016ರ 377 ಪ್ರಕರಣಗಳನ್ನು ನಮೂದಿಸಿ ಸದರಿ ಪ್ರಕರಣಗಳು ಯಾವ ಕಾರಣಕ್ಕಾಗಿ ಬಿಡುಗಡೆಯಾಗಿರುತ್ತವೆಂದು ಎಂಬ ಬಗ್ಗೆ ಗುರುತಿಸಿ ಅರ್ಹ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಲು ಪ್ರಕರಣಗಳ ವಿವರಗಳ ಪಟ್ಟಿಯನ್ನು ಲಗತ್ತಿಸಿ ಮಾನ್ಯರ ಅವಗಾಹನೆಗೆ ಸಲ್ಲಿಸಲಾಗಿದೆ.

(ಮಾನ್ಯ ಮುಖ್ಯ ಮಂತ್ರಿಗಳವರ ಅಧ್ಯಕ್ಷತೆಯಲ್ಲಿ ದಿನಾಂಕ: 25.04.2017ರಂದು ನಡೆದ ಸಭೆಯ ನಡವಳಿ ಪ್ರತಿಯನ್ನು ಮಾನ್ಯರ ಅವಗಾಹನೆಗಾಗಿ ಈ ಪತ್ರದೊಂದಿಗೆ ಸಲ್ಲಿಸಲಾಗಿದೆ.)

ಆದುದರಿಂದ ಈ ವಿಷಯದ ಬಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರವರ ಅವಗಾಹನೆಗೆ ತಂದು, ನಡವಳಿಯಲ್ಲಿ ನಮೂದಿಸಿದಂತೆ ಸದರಿ ಪ್ರಕರಣಗಳ ವಿಶ್ಲೇಷಣೆ ಬಗ್ಗೆ ಸಭೆ ನಡೆಸುವ ಕುರಿತು ಸೂಕ್ತ ದಿನಾಂಕ ಮತ್ತು ವೇಳೆಯನ್ನು ನಿಗದಿಪಡಿಸಿಕೊಡಬೇಕೆಂದು ವಿನಂತಿಸಲಾಗಿದೆ.

ತಮ್ಮ ವಿಶ್ವಾಸಿ,

(ಕೆ.ರುದ್ರಸ್ವಾಮಿ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು (ಪ್ರ),
ಬೆಂಗಳೂರು.

ಪ್ರತಿಯನ್ನು: ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ:ಬಿ6/ಎಸ್‌ಸಿಪಿ-ಟಿಎಸ್‌ಪಿ/ಸಿಆರ್-4/2017-18

ಅಪರ ಪ್ರಧಾನ ಮುಖ್ಯಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ) ರವರ ಕಛೇರಿ, "ಅರಣ್ಯ ಭವನ",
ಬೆಂಗಳೂರು, ದಿನಾಂಕ: 07-07-2017.
26

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವೃತ್ತ,
ಬಳ್ಳಾರಿ

**ವಿಷಯ:** ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 25-04-2017 ರಂದು ನಡೆದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ 1989 ಮತ್ತು ನಿಯಮಗಳು 1995 ರಡಿ ರಾಜ್ಯ ಮಟ್ಟದ ಜಾಗೃತ ಮತು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳಿಗೆ ಅನುಪಾಲನಾ ವರದಿ ನೀಡುವ ಬಗ್ಗೆ.

**ಉಲ್ಲೇಖ:** ಆಯುಕ್ತರು, ಸಮಾಜ ಕ[illegible] ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಕಇ [illegible] ಆರ್-3/ರಾಜಾಸ/2017-18, ದಿನಾಂಕ 08-0[illegible]

*****

ಉಲ್ಲೇಖಿತ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ. ಸದರಿ ಪತ್ರದೊಂದಿಗೆ ಅಡಕಗೊಳಿಸಲಾದ ಸಭಾ ನಡವಳಿಯಲ್ಲಿ ಶ್ರೀ ಕೆ.ಶಿವಮೂರ್ತಿ, ವಿಧಾನ ಸಭಾ ಸದಸ್ಯರು, ಮಾಯಗೊಂಡ ಕ್ಷೇತ್ರ, ಇವರು ಕಟ್ಟಿಗೆಗಾಗಿ ಕಾಡಿಗೆ ಹೋಗುವ ಮಹಿಳೆಯರ ಮೇಲೆ ಜಾಮೀನು ರಹಿತ ಪ್ರಕರಣಗಳನ್ನು ಅರಣ್ಯ ಇಲಾಖೆಯು ದಾಖಲಿಸುತ್ತಿರುವುದರಿಂದ ಆತ್ಮಹತ್ಯೆಗೆ ಶರಣಾಗಿರುತ್ತಾರೆಂದು ತಿಳಿಸಿರುತ್ತಾರೆ.

ಶ್ರೀ ಇ.ತುಕಾರಾಂ, ವಿಧಾನಸಭಾ ಸದಸ್ಯರು, ಸಂಡೂರು ಕ್ಷೇತ್ರ ಇವರು ಅರಣ್ಯ ವಾಸಿಗಳನ್ನು ಅರಣ್ಯದಿಂದ ಹೊರಗೆ ಕಳುಹಿಸುವ ಪ್ರಕರಣಗಳು ನಡೆಯುತ್ತಿದ್ದು, ಈ ಬಗ್ಗೆ ಅರಣ್ಯ ಇಲಾಖೆಗೆ ಸೂಕ್ತ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ.

ಈ ಎರಡೂ ಪ್ರಕರಣಗಳು ನಿಮ್ಮ ವೃತ್ತ ವ್ಯಾಪ್ತಿಯ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಒಳಪಡುವ ಕಾರಣ ನಿರ್ದಿಷ್ಟ ಪ್ರಕರಣದ ಬಗ್ಗೆ ವರದಿಯನ್ನು ಸಂಬಂಧಪಟ್ಟ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಪಡೆದು ನಿಮ್ಮ ಅಭಿಪ್ರಾಯದೊಂದಿಗೆ ಅನುಪಾಲನಾ ವರದಿಯನ್ನು ತುರ್ತಾಗಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
(ಅಭಿವೃದ್ಧಿ), ಬೆಂಗಳೂರು.

1. ಪ್ರತಿಯನ್ನು ಗೌರವಗಳೊಂದಿಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸುತ್ತಾ, ಅಧೀನ ಕಛೇರಿಯಿಂದ ವರದಿ ಪಡೆದು ಅನುಪಾಲನಾ ವರದಿ ಸಲ್ಲಿಸಲಾಗುವುದು.
2. ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ. ದಾವಣಗೆರೆ ಮತ್ತು ಬಳ್ಳಾರಿ ವಿಭಾಗಗಳಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಕರ್ನಾಟಕ ಸರ್ಕಾರ**

**ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಶ್ರೀ ಮಿಂಟೋ ಆಂಜನೇಯಸ್ವಾಮಿ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18.**

**ದೂರವಾಣಿ: 26709689/ 26706775, ಫ್ಯಾಕ್ಸ್: 26700801/Email: endowmentcommissioner@gmail.com**

**ಸಂಖ್ಯೆ:ಎಡಿಎಂ 11/ಇತರೆ/ಸಿಆರ್/14/17-18** **ದಿನಾಂಕ:22.04.2017**

ಗೆ,
ಸರ್ಕಾರದ ಅಧೀನ ಕಾರ್ಯದರ್ಶಿಗಳು-2
ಸಮಾಜ ಕಲ್ಯಾಣ ಇಲಾಖೆ,
ವಿಕಾಸ ಸೌಧ
ಬೆಂಗಳೂರು.

ಮಾನ್ಯರೇ,

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
ಕ್ರ. ಸಂ :
ದಿನಾಂಕ :
ಉ.ನಿ | ಜ.ನಿ | ಅ.ನಿ
ಶಾಖೆ: | ಶಾಖೆ: | ಶಾಖೆ:

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995ರಡಿ ರಚಿಸಲಾದ ರಾಜ್ಯ ಮಟ್ಟದ ಜಾಗೃತ ಹಾಗೂ ಉಸ್ತುವಾರಿ ಸಮಿತಿಯ ಸಭೆಗೆ ಮಾಹಿತಿ ಒದಗಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅಧೀನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ರವರ ಪತ್ರ ಸಂಖ್ಯೆ: ಸಕಇ/42/ಎಸ್.ಪಿ.ಎ/2016 ದಿನಾಂಕ:10.04.2017 (ಸ್ವೀಕೃತಿ ದಿ: 22.04.2017)
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಎಡಿಎಂ/11/ಸಿಆರ್/151/ 16-17 ದಿನಾಂಕ:26.10.2016

******

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995ರಡಿ ರಚಿಸಲಾದ ರಾಜ್ಯ ಮಟ್ಟದ ಜಾಗೃತ ಹಾಗೂ ಉಸ್ತುವಾರಿ ಸಮಿತಿಯ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:25.04.2017 ರಂದು ಪೂರ್ವಾಹ್ನ 11.00 ಗಂಟೆಗೆ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಭೆಗೆ ಹಾಜರಾಗುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಕೋರಲಾಗಿದೆ.

ಸದರಿ ಸಭಾಸೂಚನಾ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಲಾಗಿ ಕ್ರಮ ಸಂಖ್ಯೆ (10) ರಲ್ಲಿ ದೇವಸ್ಥಾನಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರವೇಶ ನಿರಾಕರಿಸುವ ಕುರಿತು ಪ್ರಸ್ತಾಪಿಸಲಾಗಿದೆ. ಈ ವಿಚಾರದ ಕುರಿತು ಈಗಾಗಲೇ ಉಲ್ಲೇಖಿತ (2)ರ ಕಛೇರಿ ಸುತ್ತೋಲೆ ದಿನಾಂಕ:26.10.2016ರಲ್ಲಿ ರಾಜ್ಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಪ್ರವರ್ಗ 'ಎ', 'ಬಿ' ಮತ್ತು 'ಸಿ' ಅಧಿಸೂಚಿತ ದೇವಾಲಯಗಳ ಮುಖ್ಯ ದ್ವಾರದಲ್ಲಿ **ದೇವರ ದರ್ಶನಕ್ಕೆ ಸರ್ವರಿಗೂ ಮುಕ್ತ ಪ್ರವೇಶ" ಎಂಬ** ನಾಮಫಲಕಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸುತ್ತೋಲೆ ಹೊರಡಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಎನ್ನುವ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.ಸುತ್ತೋಲೆ ಪ್ರತಿಯನ್ನು ಲಗತ್ತಿಸಿ

**ತಮ್ಮ ನಂಬುಗೆಯ**

**ಆಯುಕ್ತರ ಪರವಾಗಿ**
ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು.

ಪ್ರತಿಯನ್ನು :
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.

ಕು

**ಕರ್ನಾಟಕ ಸರ್ಕಾರ**

ಸಂಖ್ಯೆ: ಲಾ 57 ಎಲ್ಎಡಿ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು,ದಿನಾಂಕ: 20-08-2016

**ಇವರಿಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಾನೂನು ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

XXX
C. No - 5638/16 17
24/8/2016

**ಇವರಿಗೆ**
ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ,
3ನೇ ಮಹಡಿ,
ಬಹುಮಹಡಿ ಕಟ್ಟಡ,
ಬೆಂಗಳೂರು-1.

30/8

ವಿಷಯ: ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ತಡೆಗಟ್ಟುವ ಬಗ್ಗೆ ನ್ಯಾಯಾಲಯದಲ್ಲಿ ವಾದ ಮಂಡಿಸಲು ಹೆಚ್ಚುವರಿ ಅಡ್ವೋಕೇಟ್ ಜನರಲ್ ಹುದ್ದೆ ಸೃಜಿಸುವುದಕ್ಕೆ ಸಂಬಂಧಿಸಿದಂತೆ.

ಉಲ್ಲೇಖ: 1) ದಿನಾಂಕ: 13.01.2016ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ (ದೌರ್ಜನ್ಯತಡೆ) ಕಾಯ್ದೆ, 1989 ಮತ್ತು ನಿಯಮಗಳು 1995 ರಡಿ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯ ನಡವಳಿಗಳು.

2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ (ದೌರ್ಜನ್ಯತಡೆ) ನಿಯಮಗಳು 1989 ಮತ್ತು 1995.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ನಡವಳಿಗಳು ಹಾಗೂ ನಿಯಮಗಳತ್ತ ಗಮನ ಸೆಳೆದಿದೆ. ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ತಡೆಗಟ್ಟುವ ಬಗ್ಗೆ ನ್ಯಾಯಾಲಯದಲ್ಲಿ ವಾದ ಮಂಡಿಸಲು ಹೆಚ್ಚುವರಿ ಅಡ್ವೋಕೇಟ್ ಜನರಲ್ ಹುದ್ದೆ ಸೃಜಿಸುವುದಕ್ಕೆ ಈ ಸಂಬಂಧಿಸಿದಂತೆ ಕೆಳಕಂಡಂತೆ ಅಭಿಪ್ರಾಯ ಪಟ್ಟಿರುತ್ತಾರೆ.

"Considering the nature, types of work and work load in the High Court of Karnataka at various Benches, it may not be feasible nor advisable to create and appoint separately an Additional Advocate General, to handle cases pertaining to obtaining of false caste certificates, as being suggested by the Department.

2. .

2. The presently working Additional Advocate General's services can always be availed for the purpose and, concerned Litigating Officers be informed of availability of services of Additional Advocate General's at Bengaluru and Kalaburagi and, if need be, one of Additional Advocate General could be deputed for case specific case at Dharwad Bench. The Office of the Advocate General's Office may be addressed with a request for any such assistance in any particular case."

ಈ ಹಿನ್ನೆಲೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ನೇರವಾಗಿ ಸಂಬಂಧಿತ ಪ್ರಾಧಿಕಾರಗಳು ಅಡ್ವೊಕೇಟ ಜನರಲ್ ಕಛೇರಿಯನ್ನು ಸಂಪರ್ಕಿಸಬಹುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

2୯.8.16

(ತುಕಾರಾಮ ಕಲ್ಯಾಣಕರ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಇಲಾಖೆ(ಆಡಳಿತ-2)